


# ಮಾನವೀಯತೆಯ ಹೂರಣ; ನಗೆಲೇಪನ



**ಹಲವು ದಶಕಗಳಿಂದ ನಗೆಯ ಹಾಯಿದೋಣಿಗಳನ್ನು ಸಹೃದಯರ ಮನಸ್ಸುಗಳಿಗೆ ಮುಟ್ಟಿಸುತ್ತಿರುವ ಕೆ.ಆರ್. ಸ್ವಾಮಿ ಅವರದು ದಣಿವರಿಯದ ನಗೆಕಾಯಕ. ಹಿರಿಯ ವ್ಯಂಗ್ಯಚಿತ್ರಕಾರನೊಂದಿಗಿನ ಈ ಸಂದರ್ಶನ ದೀಪಾವಳಿ ಸಂದರ್ಭದಲ್ಲಿನ ನಗೆಪಟಾಕಿ!**

■ **ಸಂಕೇತ್ ಗುರುದತ್ತ**

ಕನ್ನಡ ನಾಡು ಕಂಡ ಖ್ಯಾತ ವ್ಯಂಗ್ಯಚಿತ್ರಕಾರರಲ್ಲಿ ಕೆ.ಆರ್. ಸ್ವಾಮಿ ಅಗ್ರಪಂಕ್ತಿಯಲ್ಲಿರುವ ಕಲಾವಿದರಲ್ಲೊಬ್ಬರು. ಇತ್ತೀಚೆಗಷ್ಟೇ 79ನೇ ವರ್ಷಕ್ಕೆ ಕಾಲಿಟ್ಟಿದ್ದರೂ ಸ್ವಾಮಿ ಅವರ ಗೆರೆಗಳ ತಾರುಣ್ಯ ಕಳೆಗುಂದಿಲ್ಲ. ಈ ವಯೋಮಾನದಲ್ಲೂ ತಮ್ಮ ನೆಚ್ಚಿನ ಹವ್ಯಾಸವಾದ ಕಾರ್ಟೂನ್ ರಚನೆಯನ್ನು ಮಾತ್ರ ಅವರು ಬಿಟ್ಟಿಲ್ಲ.

ವೃತ್ತಿಯಲ್ಲಿ ಎಂಜಿನಿಯರ್ ಆದ ಸ್ವಾಮಿ ಕರ್ನಾಟಕ ವಿದ್ಯುನ್ಮಂಡಲಿಯಲ್ಲಿ 32 ವರ್ಷಗಳ ಸೇವೆ ಸಲ್ಲಿಸಿದ್ದಾರೆ. ವೃತ್ತಿಯಿಂದ ನಿವೃತ್ತಿ ಹೊಂದಿದ್ದರೂ ಪ್ರವೃತ್ತಿಯಲ್ಲಿನ ಉತ್ಸಾಹ ಮಾತ್ರ ಇಮ್ಮಡಿಗೊಂಡಿದೆ. ಸತತ ನಾಲ್ಕೈದು ದಶಕಗಳಿಂದ ಕಾರ್ಟೂನ್ ರಚನೆಯಲ್ಲಿ ತೊಡಗಿರುವ ಅವರು ಈಗಲೂ ಆರೋಗ್ಯವಾಗಿ, ಲವಲವಿಕೆಯಿಂದ ಇದ್ದಾರೆ. ಆ ಉತ್ಸಾಹಕ್ಕೆ ಕಾರಣ ಈ ನಗೆಗುಳಿಗೆಯೇ ಸಿದ್ಧೌಷಧಿ ಎನ್ನಡ್ಡಿಯಿಲ್ಲ. ಅವರೇ ಹೇಳುವಂತೆ – 'ನಗದವರಿಗೆ ನಗೆ ಟಾನಿಕ್' ಹಂಚುವ ಕೆಲಸವನ್ನು ನಿಲ್ಲಿಸಲು ಸಾಧ್ಯವೇ ಇಲ್ಲವಂತೆ!

ಇಂತಹ ನಗೆ ಗಾರುಡಿಗ ಸ್ವಾಮಿ ಅವರನ್ನು 'ಸುಧಾ'ಕ್ಕಾಗಿ ಮಾತಿಗೆಳೆದಾಗ,`ನಗೆ ಟಾನಿಕ್' ಅನ್ನು ಹಂಚುತ್ತಿರುವ ತಮ್ಮ ನಗೆ ಪಯಣದ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟಿದ್ದಾರೆ.

◆ **ಆರ್.ಕೆ. ಲಕ್ಷ್ಮಣ್ ಅವರ ಇನಿಷಿಯಲ್ ಅನ್ನು ತಿರುಗುಮುರುಗಾಗಿಸಿದಂತೆ ನಿಮ್ಮ ಹೆಸರಿನಲ್ಲಿ 'ಕೆ.ಆರ್.'ಇದೆ. ಏನು ಹಾಗೆಂದರೆ?**

ಕಮಕೋಡು ರಾಮಸ್ವಾಮಿ, ನನ್ನ ಹೆಸರು. ಅದರ ಶಾರ್ಟ್ ವರ್ಶನ್ ಕೆ.ಆರ್. ಸ್ವಾಮಿ.